**ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.**

**ಸಿ.ಸಿ. ನಂ** ಃ 778/2022

ಚಾ.ಸಾ ಃ 5

ಪ್ರಾ.ಸಾ ಃ 4

ಸಾಕ್ಷಿದಾರರ ಹೆಸರು ಃ ಅಶೋಕ

ತಂದೆಯ ಹೆಸರು ಃ ನಾಗಪ್ಪ ಪೂಜಾರಿ

ಪ್ರಾಯ ಃ **39** ವರ್ಷ

ಉದ್ಯೋಗ ಃ ಅಂಚೆ ಇಲಾಖೆ ಉದ್ಯೋಗಿ ಬೆಂಗಳೂರ

ವಾಸಸ್ಥಾನ : ಬೆಂಗಳೂರು

ಪ್ರಮಾಣ ವಚನ ಭೋದಿಸಿದ ದಿನಾಂಕ ಃ 19.12.2023

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನಾನು **20-12-2007** ರಿಂದ **30-08-2020** ರವರೆಗೆ ಕರ್ನೂರು ಶಾಖಾ ಅಂಚೆ ಕಚೇರಿಯಲ್ಲಿ ನಾನು ಪೋಸ್ಟ್‌ಮ್ಯಾನ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ಆ ಸಮಯದಲ್ಲಿ ಗಿರೀಶಿ ಕೆ ಎನ್ನುವವರು ಪೊಸ್ಟ್‌ಮಾಸ್ಟರ ಎನ್ನುವವರು ಕರ್ತವ್ಯ ನಿರ್ವಹಿಸುತ್ತಿದ್ದರು. ಆ ಸಮಯದಲ್ಲಿ ಅಂದರೆ **2016-17** ರಲ್ಲಿ ಅಂಚೆ ಕಚೇರಿಯಲ್ಲಿ ಆರೋಪಿಯು ಕರ್ತವ್ಯ ನಿರ್ವಹಿಸುತ್ತಿರುವಾಗ ಯತೀಕ್ಷಾ ಎಸ್ ಎಸ್ ಅಕೌಂಟ ಸಂ **100209** ಖಾತೆಯಲ್ಲಿ ರೂ **2000/-** ಅವರ ತಾಯಿ ಶಾಲಿನಿ ಎಂಬುವವರು ಜಮಾ ಮಾಡಿದ್ದು ಅದನ್ನು ಅವರು ಇಲಾಖೆಗೆ ಜಮಾ ಮಾಡದೇ ಅವರು ಸ್ವಂತಕ್ಕೆ ಉಪಯೋಗಿಸಿರುತ್ತಾರೆ. ಪಾತೀಮಾತ ಹಸ್ಯೆನನುನ್ನಿಸಾ ತಂದೆ ಹಸ್ಯೆನ್ನಾರ ಎಂಬುವವರ ಎಸ್ ಎಸ್ ಎ ಖಾತ ನಂ

**100319** ರಲ್ಲಿ ಒಟ್ಟು ಮೊತ್ತ ರೂ **11000/-** ರಷ್ಟು ಹಣ ಜಮಾ ಆಗಿರತ್ತದೆ ಆದರೆ ಅದನ್ನು ಇಲಾಖೆ ಜಮಾ ಮಾಡದೇ ಆರೋಪಿಯು ತನ್ನ ಸ್ವಂತ ಖರ್ಚಿಗೆ ಉಪಯೋಗಿಸಿಕೊಂಡಿರುತ್ತಾರೆ.

ಬಿ ಪಾತೀಮಾ ಎನ್ನುವವರು ಎಸ್ ಬಿ ಖಾತೆ ನಂ ಒಟ್ಟು **7** ಸಂಖ್ಯೆ ಬರುತ್ತದೆ ಕೊನೆ ಸಂಖ್ಯೆ **356** ಆಗಿರುತ್ತದೆ . ಅದರಲ್ಲಿ ಒಟ್ಟು ಮೊತ್ತ **37000/-** ಹಣವನ್ನು ಅವರ ಪಾಸಬುಕ್‌ಗು ಮತ್ತು ಇಲಾಖೆಗೂ ಜಮಾ ಮಾಡದೇ ಅರೋಪಿಯು ತನ್ನ ಸ್ವಂತ ಖರ್ಚಿಗೆ ಉಪಯೋಗಿಸಿಕೊಂಡಿರುವುದು ಇಲಾಖೆಗೆ ವಿಶ್ವಾಸದ್ರೋಹ ಮತ್ತು ಅಂಚೆ ನಿಯವನ್ನು ಉಲ್ಲಂಘನೆ ಮಾಡಿರುತ್ತಾರೆ. ನಂತರ ಇಲಾಖೆ ಮೇಲಾಧಿಕಾರಿಗಳು ಆರೋಪಿಯನ್ನು ವಿಚಾರಣೆ ಮಾಡಿ ಅವರನ್ನು ಉದ್ಯೋಗದಿಂದ ವಜಾ ಮಾಡಿರುತ್ತಾರೆ.

ಈ ಬಗ್ಗೆ ಪೋಲಿಸರು ನಮ್ಮನ್ನು ವಿಚಾರಣೆ ಮಾಡಿರುತ್ತಾರೆ. ನಾನು ಹೇಳಿಕೆಯನ್ನು ನೀಡಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಯುತ ಡಿ ಕೆ ವಕೀಲರಿಂದಃ**

ಕನೂರ್ರು ಅಂಚೆ ಶಾಖೆಯಲ್ಲಿ ಒಟ್ಟು ಎಷ್ಟು ಖಾತೆಗಳು ಇತ್ತು ಎಂದು ನಿಖರವಾಗಿ ಹೇಳಬಹುದಾ ಎಂದರೆ ನಿಖರವಾಗಿ ಹೇಳುವ ಜವಾಬ್ದಾರಿ ನನ್ನದಲ್ಲ. ಎಷ್ಟು ಉಳಿತಾಯ ಖಾತೆಗಳು ನಿಖರವಾಗಿ ಹೆಳಬಹುದಾ ಎಂದರೆ ಇಲ್ಲ. ಎಲ್ಲಾ ಉಳಿತಾಯ ಖಾತೆದಾರರ ಮತ್ತು ಖಾತೆಯಲ್ಲಿ ಎಷ್ಟು ಎಷ್ಟು ಹಣ ಜಮಾ ಮಾಡಿರುತ್ತಾರೆ ಎಂದು ಹೇಳಬಹುದಾ ಎಂದರೆ ಇಲ್ಲ. ನೀವು ಪೋಸ್ಟ ಮ್ಯಾನ ಆಗಿ ಪೋಸ್ಟನಲ್ಲಿ

ಇರುವ ಪತ್ರಗಳನ್ನು ತೆಗೆದುಕೊಳ್ಳುವುದು ಮತ್ತು ಹಂಚುವುದು ಅಷ್ಟೇ ನಿಮ್ಮ ಕೆಲಸ ಎಂದರೆ ಸರಿ. ಪೋಸ್ಟ ಅಪೀಸಿನಲ್ಲಿ ಎಷ್ಟೇಷ್ಟು ಗ್ರಾಹಕರು ಎಷ್ಟು ಎಷ್ಟು ಹಣ ಜಮಾ ಮಾಡಿರುತ್ತಾರೆ ಎಷ್ಟು ಹಣ ಬಿಡುಗಡೆ ಮಾಡಿಸಿಕೊಳ್ಳುತ್ತಾರೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿ. ಪೊಸ್ಟ ಇಲಾಖೆಯಲ್ಲಿ ಬರುವ ಎಲ್ಲಾ ಖಾತೆ ಹಣವನ್ನು ಜಮಾ ಮಾಡುವ ಬರವಣಿಗೆಯನ್ನು ಪೊಸ್ಟ ಮಾಸ್ಟರ ಮಾಡುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಕಂಪ್ಯೂಟರ ಡಿವೈಸ ಇರಲಿಲ್ಲ. ಪಾಸಪುಸ್ತಕದಲ್ಲಿ ಪೆನ್ನಿನಲ್ಲಿ ಬರೆಯುತ್ತಿದ್ದರು. ಯತೀಕ್ಷಾ ರವರ ಪೋಸ್ಟ ಇಲಾಖೆಯ ಖಾತೆಯನ್ನು ಯಾವಾಗ ತೆಗೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಯತೀಕ್ಷಾ ರವರ ಖಾತೆಗೆ ರೂ 2000/- ಹಣ ಯಾವಾಗ ಜಮಾ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪಾತೀಮಾ ಹಸೈನುನ್ನಿಸಾ ರವರು ರೂ 11000/- ಹಣ ಯಾವಾಗ ಜಮಾ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯತೀಕ್ಷಾ ರವರ ಪಾಸ ಪುಸ್ತಕವನ್ನು ನೀವು ಖುದ್ದಾಗಿ ನೋಡಿರುತ್ತೀರಾ ಎಂದರೆ ಹಣ ಜಮಾ ಮಾಡುವ ಸಮಯದಲ್ಲಿ ಪಾರ್ಟಿ ಗಳು ನನಗೆ ತೋರಿಸುತ್ತಿದ್ದರು ಮತ್ತು ಪ್ರಾಡ್ ಆಗುವ ಸಮಯದಲ್ಲಿ ನನ್ನ ಮೇಲಾಧಿಕಾರಿಗಳು ತೋರಿಸುತ್ತಿದ್ದರು. ಅಂದರೆ ಪೋಲಿಸ ಅಧಿಕಾರಿಗಳು ಹೇಳಿದ ಮೇಲೆ ಈ ವಿಚಾರ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ನಿಮ್ಮ ಮೇಲಾಧಿಗಳು ಹೇಳಿದ ಮೇಲೆ ಈ ವಿಷಯ ಗೊತ್ತಾಗಿದೆ ಎಂದರೆ ಸರಿ. ನಾನು ಮೇಲಾಧಿಕಾರಿಗಳ ಜೊತೆಗೆ ಹಸೈನಾರ ರವರ ಮನೆಗೆ ಹೋಗಿದ್ದೆ.

ಬಿ ಪಾತೀಮಾ ರವರ ಉಳಿತಾಯ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂದರೆ ನನಗೆ ನಿಖರವಾಗಿ ಗೊತ್ತಿಲ್ಲ. ಯಾವ ತಾರೀಖಿನಂದು ರೂ 37000/-

ಹಣ ವಂಚನ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನನಗೆ ಅವರ ಮನಗೆ ಮೇಲಾಧಿಕಾರಿಗಳೊಂದಿಗೆ ಹೋದಾಗ ಗೊತ್ತಾಗಿರುತ್ತದೆ. ಮೇಲಾಧಿಕಾರಿಗಳ ಜೊತೆ ಅವರ ಮನೆಗೆ ಯಾವ ದಿನಾಂಕದಂದ್ದು ಹೋಗಿದ್ದು ನನಗೆ ನೆನಪು ಇಲ್ಲ. ನನ್ನನ್ನು ಪೋಲಿಸರು ದಿಃ 08-11-2019 ರಂದು ನನ್ನ ಮೇಲಾಧಿಕಾರಿಗಳ ಸಮಕ್ಷಮದಲ್ಲಿ ಕರ್ನೂಲು ಅಂಚೆ ಇಲಾಖೆಯಲ್ಲಿ ವಿಚಾರಣೆ ಮಾಡಿರುತ್ತಾರೆ. ನಾನು ನನ್ನ ಹೇಳಿಕೆಯನ್ನು ಹೇಳಿರುತ್ತೇನೆ ಪೋಲಿಸರು ಟೈಪು ಮಾಡಿರುತ್ತಾರೆ. ಯಾವ ಮಶೀನಿಂದ ಟೈಪ ಮಾಡಿರುತ್ತಾರೆ ಎಂದು ನನಗೆ ನೆನಪು ಇಲ್ಲ. ಅದನ್ನು ಟೈಪ ಮಾಡುವ ಸಮಯದಲ್ಲಿ ಪ್ರವೀಣ, ಅಶ್ರಪ ಎನ್ನುವವರು ಅಂಚೆ ನಿರೀಕ್ಷಕರು ನನ್ನೊಂದಿಗೆ ಇದ್ದರು. ಆ ಹೇಳಿಕೆಗಳಿಗೆ ಅವರೂ ಸಹ ಸಹಿ ಹಾಕಿರುತ್ತಾರೆ ಎಂದು ನನಗೆ ನೆನಪು ಇಲ್ಲ. ಮೇಲಾಧಿಕಾರಿಗಳ ಒತ್ತಡದ ಮೇರೆಗೆ ಅವರ ಪರವಾಗಿ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಜಾಂಶ ಗೊತಾದ ಕಾರಣ ನಡೆದ ವಿಷಯ ಹೇಳುತ್ತಿದ್ದೇನೆ. ಆರೋಪಿ ಗಿರೀಶ ಮೊಸ ವಂಚನೆ ಹಣದ ದುರುಪಯೋಗ ಮಾಡಲಿಲ್ಲ ಎಂದರೆ ಸರಿಯಲ್ಲ. ಇಲಾಖೆಯಲ್ಲಿರುವ ಹಣದ ವ್ಯತ್ಯಾಸವನ್ನು ಸರಿದೂಗಿಸಲು ಮೇಲಾಧಿಕಾರಿಯೊಂದಿಗೆ ಶಾಮಿಲಾಗಿ ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸಾಕ್ಷಿದಾರರ ಹಣದ ದುರುಪಯೋಗ ವಾಗಲಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು,ದ.ಕ.

## ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು ದ.ಕ.

**ಸಿ.ಸಿ. ನಂ : 778/2022**

ಚಾ.ಸಾ : 4
ಪ್ರಾ.ಸಾ : 5

ಸಾಕ್ಷಿದಾರರ ಹೆಸರು : ಬಿ ಪಾತೂಮಾ

ಗಂಡನ ಹೆಸರು : ಮೊಯಿದ್ದಿನ

ಪ್ರಾಯ : **47** ವರ್ಷ

ಉದ್ಯೋಗ : ಕೂಲಿ

ವಾಸಸ್ಥಾನ : ಮುಡ್ನೂರು ಗ್ರಾಮ

ಪ್ರಮಾಣ ವಚನ ಭೋದಿಸಿದ ದಿನಾಂಕ : 19.12.2023

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ನನಗೆ ಕನುರ್ಾರು ಅಂಚೆ ಕಚೇರಿಯಲ್ಲಿ ಉಳಿತಾಯ ಖಾತೆ ಹೊಂದಿದ್ದೆ ಅದನ್ನು **2014** ರಲ್ಲಿ ತೆರೆದಿದ್ದೇನೆ. ಆ ಸಮಯದಲ್ಲಿರುವ ಆರೋಪಿ ಗಿರೀಶ ರವರು ಪೊಸ್ಟ ಮಾಸ್ಟರ ಆಗಿದ್ದರು. ಆಗ ನನ್ನ ಖಾತೆಯಲ್ಲಿ ರೂ **37000/-** ಹಣ ಇತ್ತು. ಅದನ್ನು ಆರೋಪಿಯು ಸ್ವಂತಕ್ಕೆ ಉಪಯೋಗಿಸಿಕೊಂಡಿರುತ್ತಾರೆ. ಈ ಬಗ್ಗೆ ನನ್ನನ್ನು ಅಂಚೆ ಇಲಾಖೆ ಮೇಲಾಧಿಕಾರಿಗಳು ವಿಚಾರಿಸಿರುತ್ತಾರೆ. ನಾನು ಅವರ ಮುಂದೆ ಹೇಳಿಕೆ ನೀಡಿದ್ದೇನೆ. ಆ ಸಮಯದಲ್ಲಿ ಪಾಸ ಪುಸ್ತಕವನ್ನು ಪೋಲಿಸರಿಗೆ ಕೊಟ್ಟಿದ್ದೇನೆ. ಇದರ ಬಗ್ಗೆ ಪೋಲಿಸರು ನನ್ನನ್ನು ವಿಚಾರಿಸಿರುತ್ತಾರೆ. ನಾನು ಹೇಳಿಕೆ ನೀಡಿದ್ದೇನೆ. ಸಾಕ್ಷಿಗೆ ಈಗಾಗಲೇ

ಗುರುತಿಸಲಾಗಿರುವ ನಿಪಿ-**11** ನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ಅಂಚೆ ಮೇಲ್ವಿಚಾರ ಬಳಿಯಲ್ಲಿ ನೀಡಿರುವ ಹೇಳಿಕೆ ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ಈಗಾಗಲೇ ನಿಪಿ-**25** ಎಂದು ಗುರುತಿಲಾಗಿರುತ್ತದೆ. ಸಾಕ್ಷಿ ಸಹಿ ನಿಪಿ-**25** ಬಿ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀಯುತ</u>** <u>ಡಿ ಕೆ</u> **<u>ವಕೀಲರಿಂದಃ</u>**

ನಾನು 2014 ರಲ್ಲಿ ಅಂಚೆ ಇಲಾಖೆಯಲ್ಲಿ ಉಳಿತಾಯ ಖಾತೆ ತೆರೆದಿರುತ್ತೇನೆ. ನನಗೆ ತಿಂಗಳು ದಿನಾಂಕ ನೆನಪು ಇಲ್ಲ. ಖಾತೆ ತೆರೆಯುವಾಗ ರೂ 65000/- ಇಟ್ಟು ಖಾತೆ ತೆರೆದಿದ್ದೇನೆ. ಯಾವ ಯಾವ ತಿಂಗಳಿನಿಂದ ಎಷ್ಟು ಹಣ ಖಾತೆಗೆ ಜಮಾ ಮಾಡಿರುತ್ತೀರಿ ಎಂದರೆ ಸ್ವಲ್ಪ ಹಣ ಖಾತೆಗೆ ಜಮಾ ಮಾಡಿದ್ದೇನೆ ಯಾವ ತಿಂಗಳು ಎಂದು ನೆನಪಿಗೆ ಬರುತ್ತಿಲ್ಲ. ನಿಮ್ಮ ಖಾತೆಯಲ್ಲಿರುವ ಹಣ ನಿಮಗೆ ಸಂದಾಯವಾಗಿರುತ್ತದೆ ಎಂದರೆ ಸರಿ. ಯಾವ ದಿನಾಂಕದಂದು ರೂ 37000/- ಹಣ ಜಮಾ ಮಾಡಿರುತ್ತೀರಿ ಎಂದರೆ ನನಗೆ ನೆನಪು ಇಲ್ಲ. ನೀವು ಸಂದಾಯ ಮಾಡಿದ ಎಲ್ಲಾ ವಿವರಣೆಯಲ್ಲಿ ಪಾಸ ಪುಸ್ತಕದಲ್ಲಿ ಬರೆಯಲಾಗಿದೆ ಎಂದರೆ ಇರಬಹುದು.

ನಾನು 4 ನೇ ತರಗತಿ ವರೆಗೆ ಒದಿದ್ದೇನೆ. ಪಾಸ ಪುಸ್ತಕದಲ್ಲಿರುವ ಎಲ್ಲಾ ಎಂಟ್ರಿಗಳು ಇಂಗ್ಲೀಷ ಭಾಷ್ಷೆಯಲ್ಲಿ ಇರುತ್ತದೆ. ನನಗೆ ಇಂಗ್ಲೀಷ ಒದಲು ಬರೆಯಲು ಬರುವುದಿಲ್ಲ. ನಾನು ನನ್ನ ಉಳಿತಾಯ ಖಾತೆಗೆ ಗರಿಷ್ಟ ರೂ 2000/- ಹಣವನ್ನು ಜಮಾ ಮಾಡುತ್ತಿದ್ದೆ ಎಂದರೆ ಸರಿ. ರೂ 37000/-

ಹಣವನ್ನು ಯಾವ ದಿನಾಂಕದಂದು ಜಮಾ ಮಾಡಿ ಅದು ಯಾವ ದಿನಾಂಕದಂದು ಎಂಟ್ರಿ ಕಾಣಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಕರ್ನೂರ ಅಂಚೆ ಇಲಾಖೆಯಲಿ ಈಗಲೂ ಸಹ ಪಾಸ ಪುಸ್ತಕ ಇರುತ್ತದೆ. ನನ್ನ ಖಾತೆಯಲ್ಲಿ ಕರ್ನೂರು ಅಂಚೆ ಇಲಾಖೆಯಲ್ಲಿ ಯಾವುದೇ ಹಣ ದೂರುಪಯೋಗ ಮಾಡಿಲ್ಲ ಎಂದರೆ ಸರಿ. ಪೋಲಿಸರು ಮತ್ತು ಅಂಚೆ ಇಲಾಖೆಯವರು ನಿಮ್ಮನ್ನು ಸುಳ್ಳಾಗಿ ಬಂದು ಸಾಕ್ಷಿದಾರರನ್ನಾಗಿ ಮಾಡಿರುತ್ತಾರೆ ಎಂದರೆ ಸರಿ. ಇನ್ನೊಮ್ಮೆ ವಕೀಲರು ಕೇಳಿದ ಇದೇ ಪ್ರಶ್ನೆಗೆ ಪೋಲಿಸರು ಮತ್ತು ಅಂಚೆ ಇಲಾಖೆಯವರು ನಿಮ್ಮನ್ನು ಸುಳ್ಳಾಗಿ ಬಂದು ಸಾಕ್ಷಿದಾರರನ್ನಾಗಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು,ದ.ಕ.